


# ರೊಮ್ಯಾಂಟಿಕ್ 'ಕುಮಾರಿ'

'ಕುಮಾರಿ 21 ಎಫ್' ತೆಲುಗಿನಲ್ಲಿ ಯಶಸ್ವಿಯಾದ ಚಿತ್ರ. ಈ ಚಿತ್ರವೀಗ ಅದೇ ಹೆಸರಿನಲ್ಲಿ ಕನ್ನಡದಲ್ಲೂ ತೆರೆ ಕಾಣಲು ಸಿದ್ಧವಾಗಿದೆ (ಆ. 3ರಂದು ತೆರೆಗೆ).

ಹಿರಿಯ ನಟ ದೇವರಾಜ್ ಅವರ ಪುತ್ರ ಪ್ರಣಾಮ್ 'ಕುಮಾರಿ 21 ಎಫ್' ಚಿತ್ರದ ಮೂಲಕ ನಾಯಕ ನಟನಾಗಿ ಗಾಂಧಿನಗರಕ್ಕೆ ಪರಿಚಯಗೊಳ್ಳುತ್ತಿದ್ದಾರೆ. ಈಗಾಗಲೇ ಪ್ರಣಾಮ್‌ರ ಸಹೋದರ ಪ್ರಜ್ವಲ್ ಹಲವಾರು ಚಿತ್ರಗಳಲ್ಲಿ ನಟಿಸಿದ್ದಾರೆ. ಅಪ್ಪ–ಅಮ್ಮ–ಅಣ್ಣನಂತೆ ಕಲಾವಿದನಾಗಿ ಗುರ್ತಿಸಿಕೊಳ್ಳುವ ಹಂಬಲ ಪ್ರಣಾಮ್ ಅವರನ್ನು ಬಣ್ಣ ಹಚ್ಚಿಕೊಳ್ಳುವಂತೆ ಮಾಡಿದೆ.

ವೇಮುಲ ಚಿತ್ರದ ನಿರ್ದೇಶಕರು. ನಿಧಿ ಕುಶಾಲಪ್ಪ ಚಿತ್ರದ ನಾಯಕಿ. ಮಧ್ಯಮವರ್ಗದ ಹುಡುಗನ ಪಾತ್ರದಲ್ಲಿನ ಪ್ರಣಾಮ್ ಹಾಗೂ ರೂಪದರ್ಶಿಯ ಪಾತ್ರದಲ್ಲಿ ಕಾಣಿಸಿ ಕೊಂಡಿರುವ ನಿಧಿ ಜೋಡಿ ತೆರೆಯ ಮೇಲೆ ಆಕರ್ಷಕವಾಗಿ, ಮಾದಕವಾಗಿ ಕಾಣಿಸಿ ಕೊಂಡಿದೆ ಎನ್ನುವ ನಿರ್ದೇಶಕರು, ತಮ್ಮ ಚಿತ್ರವನ್ನು 'ಯೂಥ್‌ಫುಲ್' ಎಂದು ಬಣ್ಣಿಸಿದ್ದಾರೆ. ರೊಮ್ಯಾಂಟಿಕ್ ಸನ್ನಿವೇಶಗಳ ಜೊತೆಗೆ ಯುವಜನತೆಯನ್ನು ರಂಜಿಸುವ ಎಲ್ಲ ಅಂಶಗಳು ಚಿತ್ರದಲ್ಲಿವೆಯಂತೆ. ಯುವ ತಲೆಮಾರಿನ ಜೀವನಶೈಲಿಯನ್ನು ಬಿಂಬಿಸುವ ಚಿತ್ರ, ಯುವಜನರ ಆತ್ಮವಿಮರ್ಶೆಗೂ ಒತ್ತಾಯಿಸುವಂತಿದೆಯಂತೆ.

'ಕುಮಾರಿ' ತೆರೆ ಕಾಣುವ ಮೊದಲೇ ಪ್ರಣಾಮ್ ಮತ್ತೊಂದು ಚಿತ್ರವನ್ನು ಒಪ್ಪಿಕೊಂಡಿದ್ದಾರೆ. ಸಾಯಿಶಿವನ್ ನಿರ್ದೇಶನದ ಹೊಸ ಚಿತ್ರದ ಶೂಟಿಂಗ್ ಸದ್ಯದಲ್ಲೇ ಆರಂಭವಾಗಲಿದೆ.



# ಭಾವ-ಬಣ್ಣಗಳ ಕೊಲಾಜ್

'ಒಂಥರ ಬಣ್ಣಗಳು' ಎನ್ನುವ ಕೊಂಚ ವಿಚಿತ್ರವಾದ ಶೀರ್ಷಿಕೆಯ ಸಿನಿಮಾ ಹೆಚ್ಚು ಸುದ್ದಿ ಮಾಡದೆ ಚಿತ್ರಮಂದಿರಗಳಿಗೆ ಬರಲು ತಯಾರಾಗಿದೆ. ಸುನೀಲ್ ಭೀಮರಾವ್ ಚಿತ್ರದ ನಿರ್ದೇಶಕರು. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಕೂಡ ಅವರದೇ.

ಶೀರ್ಷಿಕೆಗೆ ಅನುರೂಪವಾಗಿ ಕರ್ನಾಟಕದ ಪ್ರಾದೇಶಿಕ ಬಣ್ಣಗಳು ಚಿತ್ರದಲ್ಲಿ ಅನಾವರಣಗೊಂಡಿವೆ. ಮಂಗಳೂರು, ಸಾಗರ, ಉಡುಪಿ, ಸೊರಬ, ಆಗುಂಬೆ, ಮಧುಗಿರಿ, ಬಿಸಲೆ ಘಾಟ್, ಬಾಗಲಕೋಟೆ, ಬಾದಾಮಿ, ಸಿಗಂಧೂರು ಸೇರಿದಂತೆ ನಾಡಿನ ಅನೇಕ ಕಡೆ ಚಿತ್ರೀಕರಣ ನಡೆಸಿರುವ ಮೂಲಕ ಪ್ರೇಕ್ಷಕರಿಗೆ 'ಕರ್ನಾಟಕ ದರ್ಶನ' ಮಾಡಿಸಲು ನಿರ್ದೇಶಕರು ಉದ್ದೇಶಿಸಿದ್ದಾರೆ. ಪುಣೆಯಲ್ಲಿ ಕೂಡ ಚಿತ್ರೀಕರಣ ನಡೆದಿದೆ.

'ಒಂಥರ ಬಣ್ಣಗಳು' ಪಯಣದಲ್ಲಿ ನಡೆಯುವ ಕಥೆಯನ್ನು ಒಳಗೊಂಡಿದೆ. ಪ್ರತಿಯೊಬ್ಬ ವ್ಯಕ್ತಿ ಬೇರೆ ಬೇರೆ ಬಣ್ಣಗಳನ್ನು ಪ್ರತಿನಿಧಿಸುತ್ತಿದ್ದು, ವಿಭಿನ್ನ ಬಣ್ಣಗಳ ವ್ಯಕ್ತಿತ್ವಗಳು ಒಂದೆಡೆ ಕಲೆತಾಗ ಉಂಟಾಗುವ ಭಾವಲೋಕವನ್ನು ಕಾಣಿಸಲು ನಿರ್ದೇಶಕರು ಪ್ರಯತ್ನಿಸಿದ್ದಾರೆ. ಸೋನು ಗೌಡ ಹಾಗೂ ಹಿತ ಚಂದ್ರಶೇಖರ್ ತಾರಾಗಣದಲ್ಲಿರುವ ಪ್ರಮುಖರು. ಕಿರಣ್ ಶ್ರೀನಿವಾಸ್, ವೀಣಾಸುಂದರ್, ಲೋಹಿತಾಶ್ವ, ದತ್ತಣ್ಣ, ಟೆನ್ನಿಸ್ ಕೃಷ್ಣ, ಮಾಲತಿ ಸರದೇಶಪಾಂಡೆ, ಸುಚೇಂದ್ರಪ್ರಸಾದ್ ಸೇರಿದಂತೆ ಬಹುದೊಡ್ಡ ತಾರಾಗಣ ಚಿತ್ರದಲ್ಲಿದೆ. ಮನೋಹರ್ ಜೋಶಿ ಛಾಯಾಗ್ರಹಣ ಹಾಗೂ ಬಿ.ಜೆ. ಭರತ್ ಸಂಗೀತ ಸಂಯೋಜನೆ ಸಿನಿಮಾಕ್ಕಿದೆ.